**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 28.06.2025

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ

ನಾನು 9 ನೇ ತರಗತಿವರೆಗೂ ಓದಿರುತ್ತೇನೆ. ನನ್ನ ತಾಯಿಗೆ ಶುಗರ್ ಖಾಯಿಲೆ ಇರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಮ್ಮ ತಾಯಿಯವರು ಊರಿನಲ್ಲಿ ಓಡಾಡಿಕೊಂಡು ಗದ್ದೆ ಕೆಲಸ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗದ್ದೆಗೆ ಹೋಗಿ ಬರುತ್ತಾರೆ ಎಂದು ನುಡಿಯುತ್ತಾರೆ. ನನಗೆ 40 ವರ್ಷ ವಯಸ್ಸು ಇರುತ್ತದೆ. ದಾವಾ ಸ್ವತ್ತು ನಿಮ್ಮ ತಂದೆಗೆ ಮಂಜೂರಾದಾಗ ನಿಮಗೆ ಎಷ್ಟು ವಯಸ್ಸಾಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾವಾ ಸ್ವತ್ತು ನನ್ನ ತಾತನಿಗೆ 1968-69 ರಲ್ಲಿ ಮಂಜೂರಾಗಿದ್ದು ನಾನು 1984 ರಲ್ಲಿ ಜನಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳು ನಿಮ್ಮ ತಾಯಿಗೆ ಗೊತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಡೆದಿರುವ ವ್ಯವಹಾರಗಳ ಬಗ್ಗೆ ನಿಮಗೆ ಪೂರ್ತಿ ಮಾಹಿತಿ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ನಮ್ಮ ಜಮೀನಿನ ಬಾಜುದಾರರು ಇರುತ್ತಾರೆ. ಪ್ರತಿವಾದಿಯರು ನಿಮ್ಮ ಸ್ವತ್ತಿನ ಯಾವ ಯಾವ ದಿಕ್ಕಿಗೆ ಬಾಜುದಾರರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೂರ್ವ ದಿಕ್ಕಿಗೆ ಯಾರು ಇರುವುದಿಲ್ಲ, ಪಶ್ಚಿಮ ದಿಕ್ಕಿಗೆ ಉಮಾಶಂಕರ್, ಗೌಡೇಗೌಡ, ರವಿಕುಮಾರ್, ನಂದೀಶ್ ಮತ್ತು ಚಿಕ್ಕಣ್ಣರವರು, ಉತ್ತರ ದಿಕ್ಕಿಗೆ ಉಳಿದ ಪ್ರತಿವಾದಿಯರು ಬಾಜುದಾರರಾಗಿರುತ್ತಾರೆ ಎಂದು ನುಡಿಯುತ್ತಾರೆ.

ವಾದ ಪತ್ರದಲ್ಲಿ ದಾವಾ ಸ್ವತ್ತಿನ ಪಶ್ಚಿಮಕ್ಕೆ ಕಾಲುವೆ ಮತ್ತು ರಸ್ತೆ ಎಂದು ಬರೆದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುವ ರಸ್ತೆ ಆದ ನಂತರ ಯಾರ ಜಮೀನು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಉಮಾಶಂಕರ್, ಗೌಡೇಗೌಡ, ರವಿಕುಮಾರ್, ನಂದೀಶ್ ಮತ್ತು ಚಿಕ್ಕಣ್ಣರವರ ಜಮೀನುಗಳು ಇರುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಇರುವ ಕಾಲವೆಯ ಹೆಸರು ಜವರಯ್ಯ ಕಾಲುವೆ ಎಂದರೆ ಸರಿ. ನಮ್ಮ ಸ್ವತ್ತಿನ ಪಶ್ಚಿಮಕ್ಕೆ

ಇರುವ ರಸ್ತೆಯು ಮುಂದುವರೆದು ಹಿಡುವಳಿದಾರರ ಜಮೀನಿನವರೆಗೂ ಹೋಗುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ದರಸಗುಪ್ಪೆ ಗ್ರಾಮದವರೆಗೂ ಹೋಗುತ್ತದೆ ಎಂದು ನುಡಿಯುತ್ತಾರೆ. ನಮ್ಮ ದಿಕ್ಕಿನ ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯು ದಕ್ಷಿಣ ದಿಕ್ಕಿಗೆ ಪುರಾತನ ಕೊಳ ಇರುವ ಕಡೆಗೆ ಮುಂದುವರೆಯುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಮ್ಮ ಸ್ವತ್ತಿನ ಪೂರ್ವಕ್ಕೆ ಬಲ್ಲೇನಹಳ್ಳಿ - ಶ್ರೀರಂಗಪಟ್ಟಣಕ್ಕೆ ಹೋಗುವ ರಸ್ತೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಮಂಜೂರಾಗಿದ್ದ 371 ರಲ್ಲಿ 8 ಗುಂಟೆ, 370/2 ಬಿ ನಲ್ಲಿ 28 ಗುಂಟೆ ಹಾಗೂ 369/1 ರಲ್ಲಿ 28 ಗುಂಟೆ ಜಮೀನುಗಳು ಒಂದೇ ಕಡೆ ಇದ್ದವು. ಸದರಿ 3 ಸ್ವತ್ತುಗಳ ಪೂರ್ವಕ್ಕೆ ಬಲ್ಲೇನಹಳ್ಳಿ - ಶ್ರೀರಂಗಪಟ್ಟಣಕ್ಕೆ ಹೋಗುವ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಶ್ರೀರಂಗಪಟ್ಟಣದಿಂದ ಬಲ್ಲೇನಹಳ್ಳಿಗೆ ಬರುವ ಕಡೆಗೆ ರಸ್ತೆಯ ಪಕ್ಕದಲ್ಲಿಮೊದಲಿಗೆ ಯಾವ ಸರ್ವೆ ನಂಬರ್ ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ369/2 ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 369 ಸರ್ವೆ ನಂಬರ್ ನಲ್ಲಿ ಈಗ ಹೊಸ ಪೋಡು ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.369/2 ಜಮೀನಿನ ಪಕ್ಕದಲ್ಲಿ ಸರ್ವೆ ನಂ.370/2 ಬಿ ಜಮೀನು ಬರುತ್ತದೆ. ಸರ್ವೆ ನಂ.370/2 ಬಿ ಆದ ನಂತರ ಸರ್ವೆ ನಂಬರ್ 370 ರ ಜಮೀನು ಬರುತ್ತದೆ.

ಸರ್ವೆ ನಂ.369 ರಲ್ಲಿ ಈಗ ಮನೆಗಳು ಆಗಿರುತ್ತವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮದೇ ಮನೆಗಳು ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಕಾಣುವ ರಸ್ತೆಯು ಬಲ್ಲೇನಹಳ್ಳಿ - ಶ್ರೀರಂಗಪಟ್ಟಣ ರಸ್ತೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಫೋಟೋವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಪ್ರತಿವಾದಿಯರ ಪರವಾಗಿ ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ರಸ್ತೆಯ ಪಕ್ಕದಲ್ಲಿ ಅಂಗಡಿ ಮಳಿಗೆ ಇದ್ದು ಅದು ಪಂಚಾಯಿತಿಗೆ ಸೇರಿರುತ್ತದೆ. ಸದರಿ ಮಳಿಗೆಯ ಹಿಂಭಾಗದಲ್ಲಿ ಕಾಣುವ 2 ಅಂತಸ್ತಿನ ಮನೆ ನಮ್ಮದು ಇರುತ್ತದೆ. ನಮ್ಮ ಮನೆಯ ಪಕ್ಕ ಇನ್ನೂ 2 ಮನೆಗಳು ಇರುತ್ತವೆ. ಸದರಿ 2 ಮನೆಗಳ ಸೈಟ್ ಗಳನ್ನು ನನ್ನ ತಂದೆಯವರು ಕ್ರಯಕ್ಕೆ ಕೊಟ್ಟಿದ್ದು ಸದರಿ ಕ್ರಯದಾರರು ಅಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಎಡಭಾಗದಲ್ಲಿ ಕಾಣುವ

ಕಟ್ಟಡವು ಬಸ್ ಸ್ಟ್ಯಾಂಡ್ ಇರುತ್ತದೆ ಎಂದರೆ ಸರಿ. ಅದನ್ನು ಪಂಚಾಯಿತಿಯವರು ಕಟ್ಟಿರುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು.)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.